ದಿನಾಂಕ 13-03-2026 ರಂದು ಸಾಕ್ಷಿಗೆ ಕ್ರಮಬದ್ಧವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲು ವಾದಿಯ ಪರ ಶ್ರೀ ಬಿ.ಸಿ.ಸಿ., ವಕೀಲರಿಂದಃ-

10. ನಿಡಿ-2ರಲ್ಲಿ ಪುಟ 4ರಲ್ಲಿ ಬರೆದಿರುವ ಷರಾಗಳು ಕೇಸು ಹಾಕಿದ ನಂತರ ಕೇಸಿಗೋಸ್ಕರ ಸೃಷ್ಟಿಸಿರುವ ಷರಾಗಳು ಎಂದರೆ ಸರಿಯಲ್ಲ. ನಿಡಿ-2ರ ಪುಟ 4ರಲ್ಲಿರುವ ಎರಡೂ ಷರಗಳಿಗೆ ನನ್ನ ಸಹಿ ಇವೆ. ನಿಡಿ-2 ಷರಾದ ಒಂದನೇ ಸಾಕ್ಷಿ ಮಹೇಶ್‌ರವರು, ಎರಡನೇ ಸಾಕ್ಷಿಯ ಹೆಸರು ಗೊತ್ತಿಲ್ಲ. ಎರಡನೇ ಸಾಕ್ಷಿಯ ಹೆಸರು ಶಿವಲಿಂಗಯ್ಯ ಜವರೇಗೌಡ ಚನ್ನಪಟ್ಟಣ ಎಂದು ಇದೆ ಎಂದರೆ ಸಾಕ್ಷಿಯು ವೈಯಕ್ತಿಕವಾಗಿ ನನಗೆ ಪರಿಚಯ ಇಲ್ಲ ಎಂದು ನುಡಿಯುತ್ತಾರೆ. ನಿಡಿ-2ರ ಎರಡನೇ ಷರಾಕ್ಕೂ ಸಹ ಸಾಕ್ಷಿಯಾಗಿ ಮಹೇಶ್‌ರವರೇ ಸಹಿ ಮಾಡಿದ್ದಾರೆ ಎಂದರೆ ಸರಿ. ದಿನಾಂಕ 07.03.2007ಕ್ಕೆ 27,62,000/- ರೂಗಳನ್ನು ನಗದಾಗಿ ನನ್ನ ತಾಯಿ ಪಡೆದುಕೊಂಡಿದ್ದಾರೆ. ದಿನಾಂಕ 05.12.2010ಕ್ಕೆ ಎಷ್ಟು ಹಣ ಸ್ವೀಕರಿಸಿದ್ದೀರಿ ಎಂದರೆ ಸಾಕ್ಷಿಯು 10,00,000/- ಎಂದು ನುಡಿಯುತ್ತಾರೆ. ದಿನಾಂಕ 05.12.2010ಕ್ಕೆ ನೀವು 10,000/- ಸ್ವೀಕರಿಸಿದ ಬಗ್ಗೆ ನಿಡಿ-2 ಷರಾದಲ್ಲಿ ನಮೂದಿದೆ ಎಂದರೆ ಸಾಕ್ಷಿಯು 10,000/-ವೇ ಎಂದು ನುಡಿಯುತ್ತಾರೆ. ಸದರಿ 10,000/- ರೂಗಳನ್ನು ಸರ್ವೇ ಸ್ಕೆಚ್ ಮಾಡಿಸುವ ಸಲುವಾಗಿ ಎಂದು ನಿಡಿ-2ರಲ್ಲಿ ಷರಾ ಬರೆದಿದೆ ಎಂದರೆ ಸರಿ.

11. ನಿಡಿ-2ರಲ್ಲಿರುವ ದಿನಾಂಕ 07.03.2007 ಮತ್ತು ದಿನಾಂಕ 05.12.2010 ಎರಡೂ ಷರಾಗಳನ್ನು ಕೇಸು ಹಾಕಿದನಂತರ ನಾನು, ನನ್ನ ತಂದೆ, ತಾಯಿ, ನನ್ನ ಸಹೋದರ ಮತ್ತು 5ನೇ ಪ್ರತಿವಾದಿ ವೆಂಕಟೇಶ್ ರವರೆಲ್ಲಾ ಸೇರಿ ಸೃಷ್ಟಿಸಿದ್ದೇವೆ ಎಂದರೆ ಸರಿಯಲ್ಲ. ನಿಡಿ-2ರಲ್ಲಿ ಆ ಎರಡೂ ಷರಾಗಳನ್ನು ಒಂದೇ ದಿವಸ ಈ ಕೇಸು ಹಾಕಿದ ನಂತರ ಬರೆದಿರುವುದು ಎಂದರೆ ಸರಿಯಲ್ಲ. ನಿಡಿ-2ರ ಆ ಎರಡೂ ಷರಾಗಳಿಗೆ ಮಹೇಶ್‌ರವರು ಒಂದೇ ದಿವಸ ಈ ಕೇಸು ಹಾಕಿದ ನಂತರ ಒಂದೇ ಪೆನ್ನಿನಿಂದ ಸಹಿ ಹಾಕಿರುವುದು ಎಂದರೆ ಸರಿಯಲ್ಲ.

ನಿಡಿ-2ರ ಆ ಎರಡೂ ಷರಾಗಳಿಗೆ ಎರಡನೇ ಸಾಕ್ಷಿಯವರು ಸಹ ಒಂದೇ ಪೆನ್ನಿನಿಂದ ಒಂದೇ ದಿವಸ ಕೇಸು ಹಾಕಿದ ನಂತರ ಸಹಿ ಹಾಕಿರುವುದು ಎಂದರೆ ಸರಿಯಲ್ಲದಿ ದಿನಾಂಕ 07.03.2007ರ ಷರಾವನ್ನು ಯಾರು ಬರೆದಿರುವುದು ಎಂದು ನೆನಪಿಲ್ಲ. ದಿನಾಂಕ 05.12.2010ರ ಷರಾವನ್ನು ಬರೆದದ್ದು ಮಹೇಶ್ ರವರು. ನಿಡಿ-2ರಲ್ಲಿ ಒಂದನೇ ಷರಾವನ್ನು ಶಿವಲಿಂಗಯ್ಯರವರು, ಎರಡನೇ ಷರಾವನ್ನು ಮಹೇಶ್‌ರವರು ಒಂದೇ ದಿವಸ ಬರೆದಿರುವುದು ಎಂದರೆ ಸರಿಯಲ್ಲ. ವಾದಿಯು ಕರಾರನ್ನು ರದ್ದುಪಡಿಸಿದ್ದು, ಈ ಕೇಸು ಹಾಕಿದ ನಂತರ ನಿಡಿ-2ನ್ನು ನಾವು ಕೇಸಿಗೋಸ್ಕರ ಸೃಷ್ಟಿಸಿದ್ದೇವೆ ಎಂದರೆ ಸರಿಯಲ್ಲ.

12. ನಿಡಿ-3 ದಾಖಲೆ ಮಾಡಿರುವುದು ನಮಗೆ ಗೊತ್ತಿದೆ. ನಿಡಿ-3ನ್ನು ಮಾಡಿರುವ ವಿಚಾರ ಯಾವಾಗ ಗೊತ್ತಾಯಿತು ಎಂದರೆ ಸಾಕ್ಷಿಯು ಮೂರು-ನಾಲ್ಕು ತಿಂಗಳು ಆದ ನಂತರ ಗೊತ್ತಾಯಿತು ಎಂದು ನುಡಿಯುತ್ತಾರೆ. ವಾದಿ ಕಳುಹಿಸಿದ ನೋಟಿಸ್ ನನಗೆ ತಲುಪಿದ ನಂತರ ನಿಡಿ-3ರ ಬಗ್ಗೆ ನನಗೆ ಗೊತ್ತಾದದ್ದು ಎಂದರೆ ಸರಿಯಲ್ಲ. ನಿಪಿ-4 ಕ್ರಯಪತ್ರದ ಪುಟ 4 ಮತ್ತು 5ರಲ್ಲಿ ಒಂದು ಕಡೆ 60,00,000/- ಎಂದು, ಪುಟ 9ರಲ್ಲಿ 47,25,000/- ಎಂದು ಇದೆ ಯಾವುದು ಸರಿ ಎಂದರೆ ಸಾಕ್ಷಿಯು ನಾವು ಪಡೆದುಕೊಂಡಿರುವುದು 47,00,000/- ಮಾತ್ರ, ನಾವು 60,00,000/- ತೆಗೆದುಕೊಂಡಿಲ್ಲ ಎಂದು ನುಡಿಯುತ್ತಾರೆ. ನಿಪಿ-4 ಸೃಷ್ಟಿಸಿದ ದಾಖಲೆಯಾಗಿದ್ದು, ಆದ್ದರಿಂದಲೇ ಅದನ್ನು ತಯಾರಿಸಲು ಪತ್ರ ಬರೆಯಲು ಸರಿಯಾದ ಮಾಹಿತಿ ಕೊಟ್ಟಿಲ್ಲ, ಆದ್ದರಿಂದಲೇ ಅದರಲ್ಲಿ ಆ ರೀತಿ ತಪ್ಪು ಒಕ್ಕಣೆ ಇದೆ ಎಂದರೆ ಸರಿಯಲ್ಲ. ನಿಪಿ-4ರಲ್ಲಿ ಆ ರೀತಿ ತಪ್ಪು ಇರುವುದರಿಂದಲೇ ನಿಡಿ-3 ತಿದ್ದುಪಡಿ ಪತ್ರ ಮಾಡಿರುವುದು ಎಂದರೆ ಸರಿಯಲ್ಲ. ನಿಡಿ-3 ತಿದ್ದುಪಡಿ ಕ್ರಯಪತ್ರವನ್ನು ನಾನು ಓದಿ ನೋಡಿಲ್ಲ. ನಿಡಿ-3ರಲ್ಲಿ ನಿಪಿ-4 ಕ್ರಯಪತ್ರದಡಿಯಲ್ಲಿ 60,00,000/-ಕ್ಕೆ ಬದಲು ತೆಗೆದುಕೊಂಡಿರುವುದು 47,25,000/- ಮಾತ್ರ ಎಂದು ಬರೆದಿದೆ ಎಂದರೆ ಸಾಕ್ಷಿಯು ಇಲ್ಲ ಎಂದು ನುಡಿಯುತ್ತಾರೆ. ನಾನು ಸಾಕ್ಷ್ಯ ನುಡಿಯಲು ಬರುವ ಮುಂಚೆ ಸಹ ನಿಡಿ-3ನ್ನು ನಾನು ಓದಿ ನೋಡಿಲ್ಲ. ನಿಡಿ-3ಕ್ಕೆ ತಮ್ಮಣ್ಣ ಮತ್ತು

ಮಹದೇವಯ್ಯರವರು ಸಾಕ್ಷಿದಾರರಾಗಿ ಸಹಿ ಮಾಡಿದ್ದಾರೆ ಗೊತ್ತಾ ಎಂದರೆ ಗೊತ್ತಿಲ್ಲ.

13. ನಿಪಿ-4, ನಿಡಿ-1 ರಿಂದ ನಿಡಿ-3 ಎಲ್ಲಾ ದಾಖಲೆಗಳನ್ನು ರೆಡಿ ಮಾಡಿರುವುದು ಒಬ್ಬರೇ ವಕೀಲರು ಎಂದರೆ ಗೊತ್ತಿಲ್ಲ. ಭೋಜರಾಜು ಎಂಬ ವಕೀಲರು ನನಗೆ ಪರಿಚಯ ಇಲ್ಲ. ಸದರಿ ಭೋಜರಾಜು ವಕೀಲರೇ ನಿಪಿ-4, ನಿಡಿ-1 ರಿಂದ ನಿಡಿ-3 ದಾಖಲೆಗಳನ್ನು ಸೃಷ್ಟಿ ಮಾಡಿದ್ದಾರೆ ಎಂದರೆ ಸರಿಯಲ್ಲ. ನಿಪಿ-4 ಕ್ರಯಪತ್ರ ನಾವು, ನಮ್ಮ ತಂದೆ, ತಾಯಿ, ಸಹೋದರರವರು ಬರೆದುಕೊಟ್ಟ ಜಿ.ಪಿ.ಎ. ಆಧಾರದ ಮೇಲೆ ಆಗಿದೆ ಎಂದು ಬರೆದಿದೆ ಎಂದರೆ ಸರಿ. ನಿಪಿ-4 ಕ್ರಯಪತ್ರದ ದಿನಾಂಕ 27.12.2010 ಎಂದರೆ ಸರಿ. ನಿಪಿ-4 ನೋಂದಣಿಯಾಗಿರುವುದು ದಿನಾಂಕ 21.04.2011ಕ್ಕೆ ಎಂದರೆ ಸರಿ. ನಿಪಿ-4 ನೋಂದಣಿಯಾಗುವ ಮುಂಚೆಯೇ ನಿಪಿ-1ನ್ನು ನಾನು, ನನ್ನ ತಂದೆ, ತಾಯಿ, ಸಹೋದರರವರು ವಾದಿಗೆ ನೋಂದಣಿ ಮಾಡಿಕೊಟ್ಟಿದ್ದೆವು ಎಂದರೆ ಸರಿ. ದಿನಾಂಕ 27.12.2010ಕ್ಕೆ ನನಗೆ ಹಾಗೂ ನನ್ನ ಅಣ್ಣನಿಗೆ ಮಕ್ಕಳಿದ್ದರು ಎಂದರೆ ಸರಿ. ಆಗ ನನ್ನ ಮಗಳಿಗೆ ಒಂದು ವರ್ಷ, ನನ್ನ ಅಣ್ಣನ ಮಗನಿಗೆ ನಾಲ್ಕು ವರ್ಷ ವಯಸ್ಸಾಗಿತ್ತು. ನಿಪಿ-1ರಲ್ಲಿ ನನ್ನ ಮತ್ತು ನನ್ನ ಅಣ್ಣನ ಮೈನರ್ ಮಕ್ಕಳನ್ನು ತಂದಿದ್ದೇವೆ ಎಂದರೆ ಸರಿ. ನಿಪಿ-1 ಕ್ರಯಪತ್ರದ ಆಧಾರದ ಮೇಲೆ ವಾದಿಯ ಹೆಸರಿಗೆ ಪಹಣಿ ಚೇಂಜ್ ಆಗಿದೆ ಎಂದರೆ ಸರಿ. ವಾದಿಯ ಹೆಸರಿಗೆ ಪಹಣಿ ಯಾವಾಗ ಚೇಂಜ್ ಆಗಿದೆ ಎಂದು ನನಗೆ ಗೊತ್ತಿಲ್ಲ. 5ನೇ ಪ್ರತಿವಾದಿಯಿಂದ 6ನೇ ಪ್ರತಿವಾದಿಯ ಹೆಸರಿಗೆ ಮ್ಯುಟೇಶನ್, ಪಹಣಿ ಬಂದಿಲ್ಲ ಎಂದರೆ ಗೊತ್ತಿಲ್ಲ.

14. ದಿನಾಂಕ 17.03.2012ಕ್ಕೆ ನಾನು ಬೆಂಗಳೂರಿನಲ್ಲಿ ವಾಸವಿದ್ದೆ. ನಾನು ಮೈಸೂರಿನಲ್ಲಿ 2012ರ ಮೇ, ಜೂನ್‌ವರೆಗೂ ವಾಸವಿದ್ದೆ. ನೀವು ಮೈಸೂರಿನ ವಿಳಾಸದಲ್ಲಿ ವಾಸವಿದ್ದರೂ ಸಹ ವಾದಿ ಕಳುಹಿಸಿದ ನೋಟಿಸನ್ನು ನೀವು ಉದ್ದೇಶಪೂರ್ವಕವಾಗಿ ತೆಗೆದುಕೊಂಡಿಲ್ಲ ಎಂದರೆ ಸಾಕ್ಷಿಯು ಮಾಹಿತಿ ಇಲ್ಲ ಎಂದು ನುಡಿಯುತ್ತಾರೆ. ವಾದಿಯಿಂದ ನೋಟಿಸ್ ಬಂದಿತ್ತು ಎಂದು ನನಗೆ

ವಿಚಾರ ಈ ಕೇಸು ಹಾಕುವ ಮುಂಚೆಯೇ ಗೊತ್ತಿತ್ತು. ವಾದಿ ಕಳುಹಿಸಿದ ನೋಟಿಸ್‌ಗೆ ನಾನು ರಿಪ್ಲೈ ಕೊಟ್ಟಿಲ್ಲ, ನನ್ನ ತಂದೆ ಕೊಟ್ಟಿರಬಹುದು. ನೀವು ಕ್ರಯದ ಹಣವನ್ನು ವಾದಿಯಿಂದಲೂ ಹಾಗೂ 5ನೇ ಪ್ರತಿವಾದಿ ವೆಂಕಟೇಶ್ ರವರಿಂದಲೂ ತೆಗೆದುಕೊಂಡಿದ್ದೀರಿ ಎಂದರೆ ಸಾಕ್ಷಿಯು ಹೌದು, ಆದರೆ ವಾದಿಯವರು ವೆಂಕಟೇಶ್‌ಗೆ ಸೆಟಲ್‌ಮೆಂಟ್ ಮಾಡುತ್ತೇನೆ ಎಂದು ಹೇಳಿದ್ದರು ಎಂದು ನುಡಿಯುತ್ತಾರೆ. ಸೆಟಲ್‌ಮೆಂಟ್ ಆಗದಿದ್ದಾಗ ಹಣ ಹಿಂತಿರುಗಿಸಲು ಪ್ರಯತ್ನ ಪಟ್ಟಿದ್ದೀರಾ ಎಂದರೆ ಇಲ್ಲ.

15. ನಿಪಿ-4ನ್ನು ನಾನು ಓದಿ ತಿಳಿದುಕೊಂಡಿದ್ದೇನೆ. ನಿಪಿ-4 ಕ್ರಯಪತ್ರಕ್ಕೆ ಪಾರ್ಟಿಗಳು ಮತ್ತು ಸಾಕ್ಷಿದಾರರು ಸಹಿಯ ಜೊತೆ 27.12.2010 ಎಂದು ನಮೂದಿಸಿದ್ದಾರೆ ಎಂದರೆ ಸರಿ. ದಾಖಲೆಗಳಿಗೆ ಸಾಮಾನ್ಯವಾಗಿ ಸಹಿಯ ಜೊತೆ ದಿನಾಂಕ, ತಿಂಗಳು, ವರ್ಷ ನಮೂದಿಸುವುದಿಲ್ಲ ಎಂದರೆ ಸಾಕ್ಷಿಯು ಅದು ಅವರವರ ವೈಯಕ್ತಿಕ ವಿಚಾರ ಎಂದು ನುಡಿಯುತ್ತಾರೆ. ನಿಪಿ-4ನ್ನು ದಿನಾಂಕ 27.12.2010ಕ್ಕೆ ದಾಖಲೆ ಆಗಿದೆ  ಎಂದು ತೋರಿಸಲು ಆ ರೀತಿ ದಿನಾಂಕ 27.12.2010 ಎಂದು ಸಹಿಯ ಜೊತೆ ನಮೂದಿಸಿಯೇ ಸೃಷ್ಟಿಸಿದ್ದೇವೆ ಎಂದರೆ ಸರಿಯಲ್ಲ. ಪ್ರತಿವಾದಿ 5 ಮತ್ತು 6ರವರು ಹೋಗಿ ಗಲಾಟೆ ಮಾಡಿದಾಗ ನೀವು ಸಹ ಕುಮ್ಮಕ್ಕು ಕೊಟ್ಟಿದ್ದೀರಿ, ಅದಕ್ಕೆ ದೂರು ದಾಖಲಾಗಿತ್ತು ಎಂದರೆ ಸಾಕ್ಷಿಯು ಮಾಹಿತಿ ಇಲ್ಲ  ಎಂದು ನುಡಿಯುತ್ತಾರೆ. ವಾದಿ ಹಾಗೂ ಕಲ್ಲು ಕೂಚಗಳನ್ನು ಪ್ರತಿವಾದಿ 5 ಮತ್ತು 6ರವರು ನಮ್ಮ ಕುಮ್ಮಕ್ಕಿನಿಂದ ಕಿತ್ತು ಹಾಕಿದ್ದಾರೆ ಎಂದರೆ ಸರಿಯಲ್ಲ. ವಾದಿ ದೂರು ಕೊಟ್ಟ ನಂತರ ನಿಮ್ಮನ್ನು ಹಾಗೂ ಪ್ರತಿವಾದಿ 5 ಮತ್ತು 6ರವರನ್ನು ಪೊಲೀಸರು ಠಾಣೆಗೆ ಕರೆಸಿದ್ದರು ಎಂದರೆ ಸಾಕ್ಷಿಯು ನನ್ನನ್ನು ಕರೆಸಿಲ್ಲ ಎಂದು ನುಡಿಯುತ್ತಾರೆ. ಪ್ರತಿವಾದಿ 5 ಮತ್ತು 6ರವರನ್ನು ಪೊಲೀಸರು ಠಾಣೆಗೆ ಕರೆಸಿರುವ ವಿಚಾರ ನನಗೆ ಗೊತ್ತಿಲ್ಲ. ನಿಡಿ-1 ಮತ್ತು ನಿಡಿ-2 ಸೃಷ್ಟಿಸಿದ ದಾಖಲೆಗಳಾಗಿದ್ದು, ಅವುಗಳಿಗೆ ಕಾನೂನಿನಡಿ ಯಾವುದೇ ಮಾನ್ಯತೆ ಇಲ್ಲ ಎಂದರೆ ಸರಿಯಲ್ಲ.

16. ನಿಪಿ-4 ಮತ್ತು ನಿಡಿ-1 ರಿಂದ ನಿಡಿ-3ರ ಆಧಾರದ ಮೇಲೆ ಪ್ರತಿವಾದಿ 5 ಮತ್ತು 6ರವರಿಗೆ ಯಾವುದೇ ಹಕ್ಕು, ಅಧಿಕಾರ ಬರುವುದಿಲ್ಲ ಎಂದರೆ ಸರಿಯಲ್ಲ. ನಿಪಿ-4ರಲ್ಲಿ ನಮೂದಾಗಿರುವ 47,25,000/- ರೂಗಳನ್ನು 6ನೇ ಪ್ರತಿವಾದಿ 5ನೇ ಪ್ರತಿವಾದಿಗೆ ಕೊಟ್ಟಿಲ್ಲ, 5ನೇ ಪ್ರತಿವಾದಿ ನಿಮಗೆ ಕೊಟ್ಟಿಲ್ಲ ಎಂದರೆ ಸಾಕ್ಷಿಯು ವೆಂಕಟೇಶ್‌ರವರು ನಮಗೆ ಕೊಟ್ಟಿದ್ದಾರೆ ಎಂದು ನುಡಿಯುತ್ತಾರೆ. ಪ್ರತಿವಾದಿ 5 ಮತ್ತು 6ರವರು ನನ್ನ ಮೇಲೆ ಬೇರೆ ಯಾವುದೇ ಕೇಸು ಹಾಕಿಲ್ಲ. ನಾವು ವಾದಿಗೆ ಸ್ವಾಧೀನವನ್ನು ಬಿಟ್ಟುಕೊಟ್ಟಿದ್ದೆವು, ನಿಪಿ-4 ಕ್ರಯಪತ್ರದಡಿ ಸ್ವಾಧೀನ ಬಿಟ್ಟುಕೊಡಲು ಆಸ್ತಿ ಇರಲೇ ಇಲ್ಲ ಎಂದರೆ ಸರಿಯಲ್ಲ. ಪ್ರತಿವಾದಿ 5 ಮತ್ತು 6ರವರಿಗೆ ಸಪೋರ್ಟ್ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ಬಹಿರಂಗ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕರಿಸಿದೆ)

(ಸಾಕ್ಷಿಗೆ ಸಾಕ್ಷ್ಯವನ್ನು ಓದಿ ಹೇಳಲಾಗಿ ಕೇಳಿ ಸರಿ ಇದೆ ಎಂದು ಒಪ್ಪಿದ್ದಾರೆ)

**(ಲೋಕೇಶ)**
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು,
ರಾಮನಗರ.